ಅ) ಕಟ್ಟಡ ನಿರ್ಮಾಣ ಕಾರ್ಯದ ಉಸ್ತುವಾರಿಯನ್ನು ಯಾವ ಇಲಾಖೆ ವಹಿಸಿಕೊಂಡಿದೆ?

ಇ) ಇನ್ನು ಎಷ್ಟು ದಿವಸಗಳಲ್ಲಿ ಸದರಿ ಕಟ್ಟಡ ನಿರ್ಮಾಣ ಕಾರ್ಯವು ಪೂರ್ತಿಗೊಳ್ಳಲಿದೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು):

ಅ) ಕಟ್ಟಡದ ಕ್ಷ-ಕಿರಣ ವಿಭಾಗಕ್ಕೆ ಸ್ಲಾಬ್ ಹಾಕಿದ್ದು ಉಳಿಕೆ ಕೆಲಸ ಪ್ರಗತಿಯಲ್ಲಿದೆ.

ಆ) ಜಿಲ್ಲಾ ಪರಿಷತ್ ತಾಂತ್ರಿಕ ವಿಭಾಗ ಉಸ್ತುವಾರಿ ವಹಿಸಿಕೊಂಡಿದೆ.

ಇ) ಕಟ್ಟಡ ಪೂರ್ಣಗೊಳ್ಳಲು ಕನಿಷ್ಠ 8ರಿಂದ 10 ಲಕ್ಷ ರೂ.ಗಳು ಬೇಕು. ಜಿಲ್ಲಾಪರಿಷತ ಸಾಕಷ್ಟು ಹಣ ಒದಗಿಸಿದ್ದಲ್ಲಿ ಕಟ್ಟಡ ನಿರ್ಮಾಣ ಬೇಗ ಪೂರ್ಣಗೊಳ್ಳುವುದು.

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ : ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಕುಂದಗೋಳದ ಆಸ್ಪತ್ರೆ ಕಟ್ಟಡದ ಕೆಲಸ ಪ್ರಾರಂಭವಾಗಿ ಆರೇಳು ವರ್ಷಗಳಾದರೂ ಕೂಡ ಕ್ಷ-ಕ್ಷಿರಣ ವಿಭಾಗದ ಮೇಲ್ಛಾವಣಿಗೆ ಸ್ಲ್ಯಾಬ್ ಹಾಕಿದ್ದೇವೆಂದು ಹೇಳಿದ್ದಾರೆ. ಸುಮಾರು 6 ವರ್ಷಗಳಿಂದ ಆ ಕಟ್ಟಡ ಬೀಳುವಂಥ ಪರಿಸ್ಥಿತಿಗೆ ಬಂದಿದ್ದರೂ ಕೂಡ ಕ್ಷ-ಕಿರಣದ ವಿಭಾಗಕ್ಕೆ ಸ್ಲ್ಯಾಬ್ ಹಾಕಿದ್ದಾರೆ ಅಂದರೆ ಬಹಳ ವಿಷಾದನೀಯ. ಮತ್ತು ಜಿಲ್ಲಾ ಪರಿಷತ್ತಿನ ತಾಂತ್ರಿಕ ವಿಭಾಗ ಇದರ ಉಸ್ತುವಾರಿ ನೋಡಿಕೊಳ್ಳುತ್ತದೆಂದು ಹೇಳಿದ್ದಾರೆ. ಈ ಆಸ್ಪತ್ರೆಯ ಕಟ್ಟಡದ ಕೆಲಸ ಪೂರ್ಣಗೊಳಿಸಲಿಕ್ಕೆ ಸರ್ಕಾರ ಇದರ ಬಾಬ್ತು ಎಷ್ಟು ಹಣವನ್ನು ಜಿಲ್ಲಾಪರಿಷತ್‌ಗೆ ಒದಗಿಸಿದೆ ಎಂದು ಹೇಳಬೇಕು. ಸರ್ಕಾರ ಇದಕ್ಕೆ ಸೂಕ್ತ ಆದೇಶಕೊಟ್ಟು ಈ ಕಟ್ಟಡವನ್ನು ಪೂರ್ಣಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತದೆಯೇ ಎಂದು ಕೇಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ: ಇದು ನಿಧಾನವಾಗುತ್ತಿರುವ ನಮಗೂ ದುಃಖವಾಗುತ್ತಿದೆ. ಡಿಸೆಂಬರ್ 90ರ ಅಂತ್ಯದವರೆಗೆ 18.8 ಲಕ್ಷ ರೂಪಾಯಿಗಳು ಕಟ್ಟಡಕ್ಕೆ ವಿರ್ಚಾಗಿದೆ.

ಆಮೇಲೆ ಎಕ್ಸ್‌ರೇ ವಾರ್ಡ್‌ಗೆ ಸ್ಲ್ಯಾಬ್ ಹಾಕಲಾಗಿದೆ. ಕಟ್ಟಡವನ್ನು ಪೂರೈಸಲಿಕ್ಕೆ ಇನ್ನೂ 8-10ಲಕ್ಷ ರೂಪಾಯಿ ಬೇಕಾಗುತ್ತದೆ. ಜಿಲ್ಲಾಪರಿಷತ್ ಅದನ್ನು ಒದಗಿಸಿಕೊಟ್ಟರೆ, ಕೂಡಲೇ ಕಟ್ಟಡ ಪೂರ್ತಿ ಮಾಡುತ್ತೇವೆ.

ಜನಸಂಖ್ಯಾ ಯೋಜನೆಯ ವರ್ಗಾವಣೆ ಬಗ್ಗೆ

487 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಗೆ ಮಂಜೂರಾಗಿದ್ದ 14 ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಜನಸಂಖ್ಯಾ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ವರ್ಗಾಯಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ವರ್ಷಗಳ ಹಿಂದೆಯೇ ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವುದರಿಂದ ಈಗ ಮತ್ತೆ ಅದೇ ಜಿಲ್ಲೆಗೆ ಮೇಲ್ಕಂಡ ಯೋಜನೆಯನ್ನು ವರ್ಗಾಯಿಸಿರುವುದರಿಂದ ಉತ್ತರ ಕನ್ನಡ ಜಿಲ್ಲೆಗೆ ಅನ್ಯಾಯವಾದಂತಾಗುವುದಿಲ್ಲವೆ?

ಈ) ಹಾಗಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ವರ್ಗಾವಣೆ ಮಾಡಲಾಗಿರುವ ಈ ಯೋಜನೆಯನ್ನು ಮತ್ತೆ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಅನುಷ್ಠಾನಗೊಳಿಸುವಂತೆ ಮಾಡಲು ಸರ್ಕಾರದವರು ಕ್ರಮಕೈಗೊಳ್ಳುವರೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕು. ಕಲ್ಯಾಣ ಇಲಾಖೆ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನನಗೆ ಬಹಳ ಆಶ್ಚರ್ಯವಾಗುತ್ತದೆ. ಏಕೆಂದರೆ, ಇಂಡಿಯಾ ಪಾಪ್ಯುಲೇಷನ್ ಪ್ರಾಜೆಕ್ಟ್ ಮೊದಲನೇ ಹಂತದಲ್ಲಿ ಬಳ್ಳಾರಿ ಮತ್ತು ಉತ್ತರ ಕನ್ನಡಡ ಜಿಲ್ಲೆ ಇದ್ದಿಲ್ಲ. ಅನಂತರ ಉತ್ತರ ಕನ್ನಡ ಜಿಲ್ಲೆಗೆ ಮತ್ತು ಬಳ್ಳಾರಿ ಜಿಲ್ಲೆಗೆ ಒಂದು ಪ್ರಾಜೆಕ್ಟ್ ರಿಪೋರ್ಟ್ ಮಾಡಿ 14 ಕೋಟಿ ರೂಪಾಯಿ ಕೆಲಸ ತೆಗೆದುಕೊಳ್ಳಬೇಕಾಗಿತ್ತು. ಆದರೆ ಸಚಿವರು ಉತ್ತರ ಕೊಡುವಾಗ ಅದರ ಬಗ್ಗೆ ಯಾವುದೂ ಅಂತಹ ಒಂದು ಕಾರ್ಯಕ್ರಮ ಸರ್ಕಾರದ ಮುಂದೆ ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ, ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ಆದರ ಬಗ್ಗೆ ಮಾನ್ಯ ಮಂತ್ರಿಗಳು ಬೆಳಕು ಚೆಲ್ಲಬೇಕು. ಮತ್ತು ಜಿಲ್ಲೆಯ ಈ ಒಂದು ಇಲಾಖೆಯ ಅಭಿವೃದ್ಧಿ ಬಗ್ಗೆ ಯಾವ ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ತಮ್ಮ ಮುಖಾಂತರ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಸ್. ನಾಗರತ್ನಮ್ಮ: ಈ ಯೋಜನೆಯನ್ನು ಭಾರತ ಜನಸಂಖ್ಯಾ ಯೋಜನೆ ಪ್ರಕಾರ ವಿಜಾಪುರ, ಗುಲ್ಬರ್ಗ, ಬೆಳಗಾಂ, ಧಾರವಾಡ ಮತ್ತು ರಾಯಚೂರು ಜಿಲ್ಲೆಯಲ್ಲಿ ಕಾರ್ಯಗತ ಮಾಡಬೇಕಾಗಿತ್ತು. ಈ ಯೋಜನೆ 1ನೇ ಎಪ್ರಿಲ್ 1984ರಲ್ಲಿ ಪರಿಣಾಮಕಾರಿಯಾಗಿ ಪ್ರಾರಂಭವಾಗಿದ್ದು, 31-3-1989ಕ್ಕೆ ಕೊನೆಗಾಣಿಸಬೇಕಾಗಿತ್ತು. ಈ ಯೋಜನೆಗೆ 71.31 ಕೋಟಿ ರೂಪಾಯಿ ನೀಡಲಾಗಿತ್ತು. ಆದರೆ ಹಲವಾರು ಕಾರಣಗಳಿಂದ, ನಿಗದಿತ ಸೂಚಿ ಪ್ರಕಾರ ಹಣಕಾಸು ಖರ್ಚುಮಾಡದೆ, ಇದುವರೆಗಿನ ರಾಜ್ಯ ಸರ್ಕಾರದ ಕೋರಿಕೆ ಮೇರೆಗೆ ಭಾರತ ಸರ್ಕಾರ 31-3-91ರವರೆಗೆ ಈ ಯೋಜನೆಯನ್ನು ವಿಸ್ತರಿಸಿತ್ತು. ಆದರೆ ಈಗ 31ನೇ ಮಾರ್ಚ್ ಈ ಪ್ರೋಗ್ರಾಮ್ ಮುಗಿದುಹೋಗಿದೆ. ಈಗ ತಾವು ದಕ್ಷಿಣ ಕನ್ನಡ ಜಿಲ್ಲೆಗೆ ಬದಲಾಯಿಸಿದ್ದೀರಾ ಎಂದು ಕೇಳಿದ್ದೀರಿ, ಅಲ್ಲಿಗೆ ಬದಲಾಯಿಸಿಲ್ಲ. ಉತ್ತರಕನ್ನಡ ಜಿಲ್ಲೆಗೆ 14 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಮಾಡಿರತಕ್ಕದ್ದು ವರ್ಗಾಯಿಸಿಲ್ಲ. ನಾನು ಉತ್ತರವನ್ನು ಮೊದಲನೆಯ ಪ್ರಶ್ನೆಗೆ ಹೇಳಿರುವುದರಿಂದ, ತಮ್ಮ ಬಾಕಿ ಪ್ರಶ್ನೆಗಳಿಗೂ ಅದೇ ಉತ್ತರ ಎಂದು ತಾವು ಭಾವಿಸಬೇಕು.

ಅಧ್ಯಕ್ಷರು: ಪ್ರಶ್ನೋತ್ತರ ಕಾಲ ಮುಕ್ತಾಯವಾಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಇಂದ್ರಿಯ ಸುಪ್ತಿಶಾಸ್ತ್ರ ಸ್ನಾತಕೋತ್ತರ ವಿಭಾಗ ತೆರೆಯುವುದು

693 - ಶ್ರೀ ಎಂ. ರಾಮಪ್ಪ (ಬಳ್ಳಾರಿ): ಮಾನ್ಯ ಆರೋಗ್ಯ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?